**Crl.Misc.No.** 1949/2022 **PW**-1

(ದಿವ್ಯ)

**<u>ಸಾಕ್ಷಿದಾರರನ್ನು ದಿಃ 25.09.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಬಿ.ವಿ.ಎಸ್ ವಕೀಲರವರಿಂದ</u>**

ನಾನು ಪ್ರಸ್ತುತ ಅರ್ಜಿಯನ್ನು ಎದುರುದಾರರ ವಿರುದ್ಧ ಜೀವನಾಂಶ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ಅರ್ಜಿ ತಯಾರಿಸಲು ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದರೆ ನಾನೇ ಎಂದು ನುಡಿಯುತ್ತಾರೆ. ನಾನು ಹತ್ತನೇ ತರಗತಿವರಗೂ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಎದುರುದಾರರು ನನ್ನ ಅರ್ಜಿಗೆ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ಎದುರುದಾರರನ್ನು ಮದುವೆಯಾದ ನಂತರ ಎದುರುದಾರರ ಜೊತೆ ನಾನು ಒಂದು ವರ್ಷ ಜೀವನ ನಡೆಸಿರುತ್ತೇನೆ. ಒಂದು ವರ್ಷ ಎದುರುದಾರರ ಮನೆಯಲ್ಲಿದ್ದು, ನಂತರ ನಾನು ನನ್ನ ತವರು ಮನೆಗೆ ಹೋಗಿರುತ್ತೇನೆ. ನಾನು ನನ್ನ ತವರು ಮನೆಗೆ ಹೋದ ನಂತರ ತಮ್ಮ ಮತ್ತು ಎದುರುದಾರರ ಕುಟುಂಬದ ನಡುವೆ ಪಂಚಾಯಿತಿ ನಡೆದಿದೆಯಾ ಎಂದರೆ ಸಾಕ್ಷಿಯು ಸುಮಾರಿ ಬಾರಿ ಪಂಚಾಯಿತಿ ನಡೆದಿರುತ್ತದೆ ಎಂದು ನುಡಿಯುತ್ತಾರೆ.

2019 ರಿಂದ ನಾನು ಮತ್ತು ಎದುರುದಾರರು ಜೊತೆಯಲ್ಲಿ ಇಲ್ಲ ಎಂದರೆ ಸರಿ . ನನ್ನ ಮತ್ತು ಎದುರುದಾರರ ನಡುವೆ ವಿವಾಹ ಆದ ಸಮಯದಲ್ಲಿ ನನ್ನ ತವರು ಮನೆಯಿಂದ ಎದುರುದಾರರಿಗೆ ಒಂದು ಚಿನ್ನದ ಉಂಗುರ, ಬಟ್ಟೆ, ಐವತ್ತು ಸಾವಿರ ನಗದು ಹಣ ಮತ್ತು ಒಂದು ಮೋಟಾರು ಸೈಕಲ್ ಕೊಟ್ಟಿರುತ್ತೇವೆ. ಚಿನ್ನದ ಉಂಗುರ ಎಷ್ಟು ಗ್ರಾಂ ಎಂದರೆ ನಾನು ತೂಕ ಹಾಕಿಸಿಲ್ಲ ನನ್ನ ತಂದೆ ತಾಯಿಗೆ ಗೊತ್ತು ಎಂದು ನುಡಿಯುತ್ತಾರೆ. ಚಿನ್ನದ ಉಂಗುರ ಖರೀದಿಸಿದ ಬಗ್ಗೆ ರಶೀದಿ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಎದುರುದಾರರಿಗೆ ಐವತ್ತು ಸಾವಿರ ನಗದು ಹಣ ಕೊಟ್ಟಿರುತ್ತೇವೆ ಎಂದು ತಾವು ಹೇಳಿದ್ದು, ವಿವಾಹದ ಪೂರ್ವದಲ್ಲಿ ಕೊಟ್ಟಿರುತ್ತೀರಾ ಅಥವಾ ವಿವಾಹದ ನಂತರ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ವಿವಾಹದ ದಿನ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

ಮೋಟಾರ್ ಸೈಕಲ್ಲನ್ನು ಎದುರುದಾರರಿಗೆ ಕೊಟ್ಟಿರುತ್ತೇವೆ ಎಂದು ಹೇಳಿದ್ದು ಮೋಟಾರ್ ಸೈಕಲ್ ಹೆಸರು ಏನು ಎಂದು ಕೇಳಲಾಗಿ ಸಾಕ್ಷಿಯು ಮೋಟಾರ್ ಸೈಕಲ್ ಕೊಳ್ಳಲು ಹಣ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ತಮ್ಮ ಅರ್ಜಿಯಲ್ಲಿ ತಾವು ಎದುರುದಾರರಿಗೆ ಮೋಟಾರ್ ಸೈಕಲ್ ಖರೀದಿಸಲು ಹಣ

ಕೊಟ್ಟಿರುತ್ತೇವೆ ಎಂದು ಹೇಳಿದ್ದು, ಸದರಿ ಹಣದಿಂದ ಎದುರುದಾರರು ಮೋಟಾರ್ ಸೈಕಲ್ ಖರೀದಿಸಿರುತ್ತಾರೆ ಎಂದು ತಮ್ಮ ಅರ್ಜಿಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

ಸರಗೂರಿನ ಸೋಮೇಶ್ವರ ದೇವಸ್ಥಾನದಲ್ಲಿ ನನ್ನ ಮತ್ತು ಎದುರುದಾರರ ಮದುವೆ ಆಗಿರುತ್ತದೆ. ಸಾಮಾನ್ಯವಾಗಿ ದೇವಸ್ಥಾನದಲ್ಲಿ ವಿವಾಹ ಮಾಡಿಕೊಂಡೆ ಖರ್ಚು ತುಂಬಾ ಕಡಿಮೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತವರು ಮನೆಯಲ್ಲಿ ಆರ್ಥಿಕವಾಗಿ ಸುವ್ಯವಸ್ಥೆ ಇಲ್ಲದೇ ಇರುವುದರಿಂದ ಎದುರುದಾರರೇ ತಮ್ಮ ಖರ್ಚಿನಲ್ಲಿ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಎದುರುದಾರರಿಗೆ ಚಿನ್ನದ ಉಂಗುರವಾಗಲಿ, ಐವತ್ತು ಸಾವಿರ ನಗದು ಹಣವನ್ನಾಗಲಿ ಮತ್ತು ಮೋಟಾರ್ ಸೈಕಲ್ ಖರೀದಿಸಲು ಹಣವನ್ನಾಗಲಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಎದುರುದಾರರ ವೈವಾಹಿಕ ಸಂಬಂಧದ ಫಲವಾಗಿ 2 ನೇ ಅರ್ಜಿದಾರರು ದಿಃ 07.11.2019 ರಂದು ಜನಿಸಿರುತ್ತಾನೆ.

ಎದುರುದಾರರು ಬಾಡಿಗೆ ಕಾರನ್ನು ಇಟ್ಟುಕೊಂಡು ಬಾಡಿಗೆ ಹಣ ಸಂಪಾದಿಸುತ್ತಾರೆ ಎಂದು ಹೇಳಿದ್ದು, ಅವರ ಬಳಿ ಕಾರು ಇರುವ ಬಗ್ಗೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಎದುರುದಾರರ ಬಳಿ ಯಾವುದೇ ಕಾರು ಇಲ್ಲ, ಬದಲಾಗಿ ಅವರು ಕೂಲಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸಾಕ್ಷಿಯು ಎದುರುದಾರರ ಬಳಿ ಒಂದು ಕಾರು ಮತ್ತು ಒಂದು ಬೈಕು ಇರುತ್ತದೆ ಎಂದು ನುಡಿಯುತ್ತಾರೆ.

ಎದುರುದಾರರು ತಮಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಟ್ಟಿರುತ್ತಾರೆ ಎಂದು ಹೇಳಿದ್ದು, ಯಾವ ದಿನಾಂಕ, ತಿಂಗಳು ಹಿಂಸೆ ಕೊಟ್ಟಿರುತ್ತಾರೆ ಎಂದು ಹೇಳುವಿರಾ ಎಂದರೆ ಸಾಕ್ಷಿಯು ನನಗೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಎದುರುದಾರರು ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹಿಂಸೆ ಕೊಡುತ್ತಿದ್ದರು ಎಂದು ಹಿಂಸೆ ಕೊಡುತ್ತಿದ್ದರು ಎಂದು ಹೇಳಿದ್ದು, ಎಷ್ಟು ಹಣ ತರುವಂತೆ ಹಿಂಸೆ ಕೊಡುತ್ತಿದ್ದರು ಎಂದು ಹೇಳುವಿರಾ ಎಂದರೆ ಒಂದು ಲಕ್ಷ ಹಣ ತರುವಂತೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ತಮ್ಮ ಅರ್ಜಿಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಇಂತಿಷ್ಟು ಹಣ ಕೇಳಿರುತ್ತಾರೆ ಎಂದು ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ.

ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ. ಎದುರುದಾರರಿಗೂ ಸಹ ವಯಸ್ಸಾದ ತಂದೆ ತಾಯಿ ಇದ್ದು, ಅವರುಗಳು ಜೀವನ ನಡೆಸಲು ಕಷ್ಟ ಆಗುತ್ತಿದೆ ಎಂದರೆ ಸರಿಯಲ್ಲ. ಎದುರುದಾರರಿಗೆ ಚರ ಮತ್ತು ಸ್ಥಿರಾಸ್ತಿ ಇರುವ ಬಗ್ಗೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ತಮ್ಮ ಅರ್ಜಿಯಲ್ಲಿ ತಮಗೆ ಆರೋಗ್ಯದ ಸಮಸ್ಯೆ ಇರುತ್ತದೆ ಎಂದು ಹೇಳಿದ್ದು, ಈ ಬಗ್ಗೆ ವೈದ್ಯಕೀಯ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ನನಗೆ ಯಾವುದೇ ಸಮಸ್ಯೆ ಇಲ್ಲದೇ ಇದ್ದರೂ ಆರೋಗ್ಯದ

ಸಮಸ್ಯೆ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಪಂಚಾಯಿತಿ ಆಗಿರುತ್ತದೆ ಎಂದು ಹೇಳಿದ್ದು ಪಂಚಾಯಿತಿ ಯಾವಗ ಆಗಿರುತ್ತದೆ ಎಂದರೆ ಅನೇಕ ಬಾರಿ ಪಂಚಾಯಿತಿ ಆಗಿದ್ದು ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ.

ಎದುರುದಾರರು ಇವತ್ತಿಗೂ ಈಗಲೂ ತಮ್ಮನ್ನು ಎದುರುದಾರರ ಜೊತೆ ಕರೆದುಕೊಂಡು ಹೋಗಲು ತಯಾರಿದ್ದಾರೆ ಎಂದರೆ ಸಾಕ್ಷಿಯು ನನಗೆ ಪ್ರಾಣ ಭಯ ಇದೆ ಹಾಗಾಗಿ ನಾನು ಎದುರುದಾರರ ಜೊತೆ ಹೋಗುವುದಿಲ್ಲ ಎಂದು ನುಡಿಯುತ್ತಾರೆ. ಎದುರುದಾರರಿಗೆ ವಯಸ್ಸಾದ ತಂದೆ ತಾಯಿ ಇದ್ದು ಅವರನ್ನು ನೋಡಿಕೊಳ್ಳಬೇಕಾಗುತ್ತದೆ ಎಂದು ನಾನು ಎದುರುದಾರರ ಜೊತೆ ಹೋಗಲು ಇಷ್ಟ ಇಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಕೂಲಿ ಕೆಲಸಕ್ಕೆ ಹೋಗುತ್ತಿದ್ದು, ಎದುರುದಾರರು ನಾನು ಅರ್ಜಿಯಲ್ಲಿ ಕೇಳಿರುವ ಜೀವನಾಂಶ ಕೊಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ನನ್ನ ಮತ್ತು 2 ನೇ ಅರ್ಜಿದಾರರ ಜೀವನದ ನಿರ್ವಹಣೆಗೆ ಮಾಸಿಕ ಇಪ್ಪತ್ತು ಸಾವಿರ ಹಣ ಬೇಕಾಗುತ್ತದೆ. ಆದ್ದರಿಂದ ಅದನ್ನು ಕೊಡಿಸಬೇಕು ಎಂದು ನುಡಿಯುತ್ತಾರೆ.

ಎದುರುದಾರರು ವಾರ್ಷಿಕ ಐದರಿಂದ ಆರು ಲಕ್ಷ ಆದಾಯ ಗಳಿಸುತ್ತಾರೆ ಎಂದು ಹೇಳಿದ್ದು ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಎದುರುದಾರರು ವರದಕ್ಷಿಣೆ ತರುವಂತೆ ದೈಹಿಕ ಮತ್ತು ಮಾನಸಿಕ ಹಿಂಸೆ ಕೊಡದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ಅನುಕೂಲ ಪಡೆಯಲು ಎದುರುದಾರರ ಮತ್ತು ಅವರ ತಂದೆ ತಾಯಿಯ ವಿರುದ್ಧ ವಿನಾಃ ಕಾರಣ ಸುಳ್ಳು ಪಿರ್ಯಾದು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಅವರು ಕಿರುಕುಳ ಕೊಟ್ಟಿದ್ದರಿಂದ ಪಿರ್ಯಾದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ತಮ್ಮ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಎದುರುದಾರರು ತಮ್ಮ ಮೇಲೆ ಅನುಮಾನ ಪಡುತ್ತಾರೆ ಎಂದು ಹೇಳಿದ್ದು ಏನು ಅನುಮಾನ ಪಡುತ್ತಾರೆ ಎಂದರೆ ಸಾಕ್ಷಿಯು ನಾನು ಅಕ್ರಮ ಸಂಬಂಧ ಇಟ್ಟುಕೊಂಡಿದ್ದೇನೆ ಎಂದು ವಿನಾಃ ಕಾರಣ ಅನುಮಾನ ಪಡುತ್ತಾರೆ ಎಂದು ನುಡಿಯುತ್ತಾರೆ. ತಮ್ಮ ಸ್ವಂತ ಸಹೋದರರ ನಡುವೆ ಅಕ್ರಮ ಸಂಬಂಧ ಇದೆ ಎಂದು ಅನುಮಾನ ಪಡುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರ ಯಾವುದೇ ಅನುಮಾನಪಡದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಹೆಗ್ಗಡದೇವನಕೋಟೆ.